ಶ್ರೀ ಡಿ. ಮಂಜಪ್ಪ.—ಅರಣ್ಯ ಪ್ರದೇಶದ ಮುಖ್ಯಭಾಗವನ್ನು ಜಾಗು ಭೂಮಿ ಇದ್ದು ಗಿಡ ಮರ ಬೆಳೆಯದ ಪ್ರದೇಶ ಎಷ್ಟಿದೆ ಎಂಬುದನ್ನು ಕೇಳುತ್ತೀರಾ ?

ಅಧ್ಯಕ್ಷರು.—ನೀವು ಶಿವಮೊಗ್ಗಾ ಪ್ರದೇಶದ ವಿಷಯವನ್ನು ಕೇಳಬೇಡಿ, ಯಳಂದೂರಿನ ವಿಷಯ ಇದ್ದರೆ ಮಾತ್ರ ಕೇಳಿ, ಅಷ್ಟೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅರಣ್ಯ ಪ್ರದೇಶದಲ್ಲಿ ಸಾಗುವಳಿ ಇಟ್ಟುಕೊಂಡಿದ್ದವರಿಗೆ ಶಿಕ್ಷೆ ಮಾಡುತ್ತೇವೆ ಎಂದು ಹೇಳಿದಿರಿ. ಎಳಂದೂರಿನಲ್ಲಿ ಮಾತ್ರ ಮಾಡುತ್ತೀರೋ, ಅಥವಾ ಯಾವ ಊರಿನಲ್ಲಿದ್ದರೂ ಮಾಡುತ್ತೀರೋ ?

ಶ್ರೀ ಎಚ್. ಎಸ್. ರುದ್ರಪ್ಪ.—ಯಾವ ಊರಿನಲ್ಲಿದ್ದರೂ ಮಾಡುತ್ತೇವೆ. ಗುಂಡ್ಲುಪೇಟೆ ಪ್ರದೇಶದಲ್ಲಿದ್ದರೂ ಮಾಡುತ್ತೇವೆ.

ಶ್ರೀ ಯು. ಎಂ. ಮಾದಪ್ಪ.—ಡಿಸ್ಟ್ರಿಕ್ಟ್ ಫಾರೆಸ್ಟ್ ನಮಗೆ ಸೇರಿದ್ದು ಎಂದು ರೆವಿನ್ಯೂ ಇಲಾಖೆಯವರು ಇತ್ತೀಚೆಗೆ ಅಕ್ರಮ ಪ್ರವೇಶ ಮಾಡಿರುವ ಸಂದರ್ಭ ಇದೆಯೇ ?

ಶ್ರೀ ಎಚ್. ಎಸ್. ರುದ್ರಪ್ಪ.—ಒಂದು ಶಾಖೆಯು ಮೇಲೆ ಇನ್ನೊಂದು ಶಾಖೆ ಅಕ್ರಮ ಮಾಡುವುದಿಲ್ಲ.

ಶ್ರೀ ಯು.ಎಂ. ಮಾದಪ್ಪ.—ಸಾರ್ವಜನಿಕರೇನಾದರೂ ಆ ರೀತಿ ಅಕ್ರಮಪ್ರವೇಶ ಮಾಡಿದರೆ ಕ್ರಿಮಿನಲ್ ಪ್ರೊಸೀಜರ್ ಕೋಡ್ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೀರಿ. ಅದೇ ರೀತಿ ನೀವು ರೆವಿನ್ಯೂ ಇಲಾಖೆಯವರು ಪ್ರವೇಶ ಮಾಡಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಎಸ್. ರುದ್ರಪ್ಪ.—ರೆವಿನ್ಯೂ ಇಲಾಖೆಗೆ ಸಂಬಂಧಪಟ್ಟ ಜಮೀನಾದರೆ ಅವರು ತೆಗೆದುಕೊಳ್ಳುತ್ತಾರೆ. ಅರಣ್ಯಶಾಖೆಗೆ ಸಂಬಂಧಪಟ್ಟಿದ್ದಾದರೆ ಅವರು ತೆಗೆದುಕೊಳ್ಳುತ್ತಾರೆ.

ಶ್ರೀ ಯು. ಎಂ. ಮಾದಪ್ಪ.—ರೆವಿನ್ಯೂ ಇಲಾಖೆಯವರು ನಮಗೆ ಸೇರಿದ್ದೆಂದೂ, ಫಾರೆಸ್ಟ್ ಇಲಾಖೆಯವರು ಅವರಿಗೆ ಸೇರಿದ್ದೆಂದೂ, ಅವರವರಲ್ಲೇ ಡಿಸ್ಪ್ಯೂಟ್ ಬಂದಿರುವುದು ಗೊತ್ತೇ ?

ಶ್ರೀ ಎಚ್. ಎಸ್. ರುದ್ರಪ್ಪ.—ಆ ರೀತಿ ಏನೂ ಆಗಿಲ್ಲ.

ACQUISITION OF LANDS FOR CONSTRUCTING HOUSES FOR HARIJANS IN MAMBALLI VILLAGE OF YELANDUR TALUK.

†*Q.*—809. Smt. KEMPAMMA (Kollegal).—

Will the Government be pleased to state :—

(*a*) whether it is a fact that the concerned authorities have ordered the acquisition of 8 acres and 25 guntas of land in S. Nos. 854, 856, 852 and 888 for constructing houses for Harijans in Mamballi Village of Yelandur Taluk ;

(*b*) if so, the reasons for not distributing land so far ?

A.—Sri KADIDAL MANJAPPA (Minister for Revenue).—

(*a*) Yes.

(*b*) The sites will be distributed after the award is declared and the possession of the lands is taken.

ಶ್ರೀಮತಿ ಕೆಂಪಮ್ಮ.—ಯಳಂದೂರು ತಾಲ್ಲೂಕು ಮಾಂಬಳ್ಳಿಯ ಹರಿಜನರ ಅಕ್ಸಿಸಿಷನ್ ರೆಕಾರ್ಡ್ ನಡೆದು ಎಷ್ಟು ವರ್ಷ ಆಯಿತು ತಿಳಿಸುತ್ತೀರಾ ?

†ಶ್ರೀ ಕಡಿದಾಳ್ ಮಂಜಪ್ಪ.—2-3 ವರ್ಷ ಆಗಿರಬೇಕು ಎಂದು ಹೇಳಿ ಮಾನ್ಯ ಸದಸ್ಯರಿಗೇ ಗೊತ್ತಿದೆ.

ಶ್ರೀ ಬಿ. ರಾಚಯ್ಯ.—ಆ ನೋಟಿಫಿಕೇಷನ್ ಆದದ್ದು ಯಾವಾಗ ?

ಶ್ರೀ ಕಡಿದಾಳ್ ಮಂಜಪ್ಪ.—1960ನೇ ಅಕ್ಟೋಬರ್‌ನಲ್ಲಿ.

ಶ್ರೀ ಬಿ. ರಾಚಯ್ಯ.–ಇದುವರೆಗೂ ಕಾಂಪೆಸೇಷನ್ ಕೊಡದೇ ಇರುವುದಕ್ಕೆ ಕಾರಣವೇನು?

ಶ್ರೀ ಕಡಿದಾಳ್ ಮಂಜಪ್ಪ.—ಕಾಂಪೆಸೇಷನ್ ಅವಾರ್ಡ್ ಪಾಸ್ ಆಗಿದೆ. ಡಿವಿಜನಲ್ ಕಮೀಷನರ ಮಂಜೂರಾತಿ ತೆಗೆದುಕೊಂಡು ಜಾಗ್ರತೆ ಹಣ ಪಾವತಿ ಮಾಡಿ ಆ ಜಾಗವನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ರಾಚಯ್ಯ.–ಡಿವಿಜನರ್ ಕಮೀಷನರು ಹಣ ಇಲ್ಲ. ಕೂಡಲೇ ಹಣ ಒದಗಿಸಬೇಕೆಂದು ಕೇಳಿ ಈಗಾಗಲೇ 6 ತಿಂಗಳಾಗಿದೆ ಅಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—22,500 ರೂಪಾಯಿಗಳನ್ನು ಒದಗಿಸದ್ದೇವೆ.

Sri G. VENKATAI GOWDA.—Pending the award, cannot possession be taken ?

Sri KADIDAL MANJAPPA.—Not under the existing law unless exergency clause is applied.

ಶ್ರೀ ಬಿ. ರಾಚಯ್ಯ.—ಎಷ್ಟು ದಿವಸದಲ್ಲಿ ಇದನ್ನು ಮಂಜೂರು ಮಾಡಿ, ಅಥವಾ ಅವಾರ್ಡ್ ಪಾಸ್, ಸೆಟ್ ವಿಂಗಡಿನುವುದಕ್ಕೆ ಸಾಧ್ಯವಾಗುತ್ತದೆ ?

ಶ್ರೀ ಕಡಿದಾಳ್ ಮಂಜಪ್ಪ.—ಅದಷ್ಟು ಜಾಗ್ರತೆ ಮಾಡುವುದಕ್ಕೆ ಸಾಧ್ಯ ಎಂದು ತಿಳಿದುಕೊಂಡಿದ್ದೇನೆ.

PREPARATION OF INTER-STATE SENIORITY LISTS.

*Q.—876. Sri F. H. MOHSIN (Hubli City).—

Will the Government be pleased to state:—

(*a*) whether it is a fact that the procedure laid down by the Government of India in regard to preparation of Inter-State Seniority Lists was not followed by this Government;

(*b*) if so, the reasons therefor;

(*c*) the steps they have taken to rectify the position;

(*d*) when the final lists are likely to be issued?

A.—Sri B. D. JATTI (Chief Minister).—

(*a*) No.

(*b*) Does not arise in view of answer to (*a*).

(*c*) Do do

(*d*) As the final lists are to be issued by the Government of India, it is not possible to say when they are likely to be issued. Steps are being taken, however, to ensure that the matter is dealt with expeditiously, so far as the State's portion of the work is concerned.